ESI.A.No. 107/2022

AW-1,

ದಿನಾಂಕಃ 07-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿ ಶ್ರೀ ಎ.ಬಿ.ಎನ್. ವಕೀಲರಿಂದಃ

17) ನಾನು ಎರಡನೇ ಎದುರುದಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ದಿನಾಂಕ 19.05.2020 ರಂದು ನನ್ನನ್ನು ಎರಡನೇ ಎದುರುದಾರರು ಕೆಲಸದಿಂದ ತೆಗೆದುಹಾಕಿದರು ಎಂದರೆ ಸರಿ. ನನ್ನನ್ನು ಎರಡನೇ ಎದುರುದಾರರು ಕೆಲಸದಿಂದ ತೆಗೆದುಹಾಕಿದ್ದರಿಂದ ನಾನು ಕಾರ್ಮಿಕ ನ್ಯಾಯಾಲಯದಲ್ಲಿ ವಿವಾದ ಸಲ್ಲಿಸಿರುತ್ತೇನೆ ಎಂದರೆ ಸರಿ . ಎರಡನೇ ಎದುರುದಾರರು ಸಂಸ್ಥೆಯನ್ನು ಮುಚ್ಚಿ ನನ್ನನ್ನು ಕೆಲಸದಿಂದ ತೆಗೆದುಹಾಕಿರುವುದು ತಪ್ಪು ಎಂದು ಕಾರ್ಮಿಕ ನ್ಯಾಯಾಲಯಕ್ಕೆ ಹೇಳಿರುತ್ತೇನೆ ಎಂದರೆ ಸರಿ . ಕಾರ್ಮಿಕ ನ್ಯಾಯಾಲಯದಲ್ಲಿ ನನ್ನನ್ನು ಕೆಲಸಕ್ಕೆ ಮತ್ತೊಮ್ಮೆ ಸೇರಿಸಿಕೊಂಡು ಹಿಂಬಾಕಿ ವೇತನ ನೀಡಬೇಕೆಂದು ಕೋರಿದ್ದೆನು ಎಂದರೆ ಸರಿ . ಕಾರ್ಮಿಕ ನ್ಯಾಯಾಲಯದಲ್ಲಿ ನಾನು ಸಲ್ಲಿಸಿದ್ದ ವಿವಾದ ಔದ್ಯಮಿಕ ನ್ಯಾಯಾಧೀಕರಣಕ್ಕೆ ವರ್ಗಾವಣೆಯಾಯಿತು ಎಂದರೆ ಸರಿ . ಔದ್ಯಮಿಕ ನ್ಯಾಯಾಧೀಕರಣದಲ್ಲಿ ಸದರಿ ವಿವಾದ ಬಗ್ಗೆ ಏನು ತೀರ್ಮಾನವಾಯಿತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ. ಪಿ. ನಂ. 11854/2026 ಸಲ್ಲಿಸಿರುತ್ತೇನೆ

18) ಎರಡನೇ ಎದುರುದಾರರು ನನ್ನನ್ನು ಕೆಲಸದಿಂದ ತೆಗೆದುಹಾಕಿರುವುದರಿಂದ, ರಾಜೀವ್ ಗಾಂಧಿ ಶ್ರಮಿಕ ಕಲ್ಯಾಣ ಯೋಜನೆ ಅಡಿಯಲ್ಲಿ ನಾನು ಪರಿಹಾರಕ್ಕೆ ಅರ್ಹನಲ್ಲಿ ಎಂದರೆ ಸರಿಯಲ್ಲ . ಸಾಕ್ಷಿದಾರರು ಮುಂದುವರೆದು ನನ್ನ ಹಲವಾರು ಸಹೋದ್ಯೋಗಿಗಳು, ನನ್ನಂತೆ ಕೆಲಸದಿಂದ ತೆಗೆದುಹಾಕಲ್ಪಟ್ಟವರು ಸದರಿ ಯೋಜನೆ ಅಡಿಯಲ್ಲಿ ಪರಿಹಾರವನ್ನು ಒಂದನೇ ಎದುರುದಾರರಿಂದ ಪಡೆದುಕೊಂಡಿರುತ್ತಾರೆ ಎಂದು ಹೇಳಿದರು . ಕಾರ್ಮಿಕ ವಿವಾದದಲ್ಲಿ ನಾನು ಕೆಲಸಕ್ಕೆ ವಾಪಸ್ಸು ಸೇರಿಸಿಕೊಳ್ಳಬೇಕು ಮತ್ತು ಹಿಂಬಾಕಿ ವೇತನವನ್ನು ಪಾವತಿ ಮಾಡಬೇಕ ಎಂದು ಕೇಳಿಕೊಂಡಿದ್ದರಿಂದ ನಾನು ರಾಜೀವ್ ಗಾಂಧಿ ಶ್ರಮಿಕ ಕಲ್ಯಾಣ ಯೋಜನೆ ಅಡಿಯಲ್ಲಿ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ .

19) ರಾಜೀವ್ ಗಾಂಧಿ ಶ್ರಮಿಕ ಕಲ್ಯಾಣ ಯೋಜನೆ ಅಡಿಯಲ್ಲಿ ಪರಿಹಾರ ಕೊಡಬೇಕೆಂದು ಕೋರಿ ನಾನು ಒಂದನೇ ಎದುರುದಾರರಿಗೆ ಒಂದು ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ಒಂದನೇ ಎದುರುದಾರರು ನಾನು ಸಲ್ಲಿಸಿದ ಪತ್ರಕ್ಕೆ ಉತ್ತರಿಸಿದರು ಎಂದರೆ ಸರಿ , ಸದರಿ ಉತ್ತರದಲ್ಲಿ ರಾಜೀವ್ ಗಾಂಧಿ ಶ್ರಮಿಕ ಕಲ್ಯಾಣ ಯೋಜನೆ ಅಡಿಯಲ್ಲಿ ಪರಿಹಾರ ಪಡೆದುಕೊಳ್ಳಲು ನಿಗದಿತ ನಮೂನೆಗಳಲ್ಲಿ ಅರ್ಜಿಯನ್ನು ಸಲ್ಲಿಸಬೇಕು ಕೇವಲ ಪತ್ರ ಸಲ್ಲಿಸಿದರೆ ಪರಿಹಾರ ವಿತರಣೆ ಪ್ರಕ್ರಿಯೆ ಪ್ರಾರಂಭ ಮಾಡಲು

ಸಾಧ್ಯವಿಲ್ಲ ಎಂದು ತಿಳಿಸಿದರು ಎಂದರೆ ಸರಿ . ಸಾಕ್ಷಿದಾರರು ಮುಂದುವರೆದು ನಿಗದಿತಿ ನಮೂನೆಗಳನ್ನು ಒಂದನೇ ಎದುರುದಾರರಿಗೆ ಸಲ್ಲಿಸಲಾಯಿತು ಆದರೆ ಒಂದನೆ ಎದುರುದಾರರು ಕಾರ್ಮಿಕ ವಿವಾದ ಬಾಕಿ ಇರುವುದರಿಂದ ಪರಿಹಾರ ವಿತರಿಸಲು ಅವಕಾಶವಿಲ್ಲವೆಂದು ಹೇಳಿದರು. ಸದರಿ ಹಿಂಬರಹವನ್ನು ನ್ಯಾಯಾಧೀಕರಣಕ್ಕೆ ಸಲ್ಲಿಸಿರುತ್ತೇನೆ. ಒಂದು ಪಕ್ಷ ಹಿಂಬರಹ ಸಲ್ಲಿಸದಿದ್ದಲ್ಲಿ ಅದನ್ನು ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸುತ್ತೇನೆ.

20) ನನ್ನ ಪತ್ರಕ್ಕೆ ಒಂದನೇ ಎದುರುದಾರರು ಉತ್ತರ ಕೊಟ್ಟ ನಂತರ ನಾನು ನಿಗದಿತ ನಮೂನೆಗಳಲ್ಲಿ ಒಂದನೆ ಎದುರುದಾರರಿಗೆ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ . ನಾನು ಹೇಳಿರುವಂತೆ ಒಂದನೇ ಎದುರುದಾರರು ಹಿಂಬರಹವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ . ನಿಗದಿತ ನಮೂನೆಗಳಲ್ಲಿ ಒಂದನೆ ಎದುರುದಾರರಿಗೆ ಸಲ್ಲಿಸಿರುವ ಅರ್ಜಿಯ ಪ್ರತಿಗಳು ನನ್ನಲ್ಲಿ ಇರಬಹುದು, ಸದರಿ ಪ್ರತಿಗಳು ದೊರಕಿದಾಗ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಬಲ್ಲೆ. ನಿಶಾನೆ ಎ-1 ಒಂದನೇ ಎದುರುದಾರರು ಕೊಟ್ಟ ಉತ್ತರದೊಂದಿಗೆ ರಾಜೀವ್ ಗಾಂಧಿ ಶ್ರಮಿಕ ಕಲ್ಯಾಣ ಯೋಜನೆಯ ಸುತ್ತೋಲೆಯ ಪ್ರತಿಯನ್ನು ಸಹ ನಿಶಾನೆ ಎ-2 ರಂತೆ ಕಳುಹಿಸಿಕೊಟ್ಟರು ಎಂದರೆ ನನಗೆ ನೆನಪಿಲ್ಲ. ನಿಶಾನೆ ಎ-1 ಮತ್ತು ಎ- 2 ನನಗೆ ತಲುಪಿದ ನಂತರ ನಾನು ನಿಗದಿತ ನಮೂನೆಗಳಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ . ನಿಗದಿತ ನಮೂನೆಗಳಲ್ಲಿ ಒಂದನೇ ಎದುರುದಾರರಿಗೆ ಅರ್ಜಿ ಸಲ್ಲಿಸದೇ , ಔದ್ಯಮಿಕ ನ್ಯಾಯಾಧೀಕರಣದಲ್ಲಿ ನಾನು ಸಲ್ಲಿಸಿರುವ ಅರ್ಜಿಯು ಊರ್ಜಿತವಾಗತಕ್ಕದಲ್ಲ ಎಂದರೆ ಸರಿಯಲ್ಲ . ಒಂದನೇ ಎದುರುದಾರರು ನಾನು ಪರಿಹಾರಕ್ಕೆ ಅರ್ಹನಲ್ಲ ಎಂದು ಯಾವುದೇ ಆದೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಒಂದನೇ ಎದುರುದಾರರು ನಾನು ಪರಿಹಾರಕ್ಕೆ ಅರ್ಹನಲ್ಲ ಎಂದು ಮಾಡಿರುವ ಆದೇಶದ ಪ್ರತಿಯನ್ನು ಹಾಜರು ಪಡಿಸಬಲ್ಲೆ.

21) ನಿಯಮದಂತೆ ನಾನು ಅರ್ಜಿ ಸಲ್ಲಿಸಲಿಲ್ಲ ಆದ್ದರಿಂದ ನಾನು ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ .

ಪಾಟೀ ಸವಾಲುಃ- ಎದುರುದಾರರ ಪರವಾಗಿ ಶ್ರೀ ಜೆ.ಪಿ. ವಕೀಲರಿಂದಃ

22) ನಾನು ಎರಡನೇ ಎದುರುದಾರರ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಒಟ್ಟು 63 ಕಾರ್ಮಿಕರು ಇದ್ದರು ಅವರೆಲ್ಲರೂ ಕಾರ್ಮಿಕ ಸಂಘದ ಸದಸ್ಯರಾರಿದ್ದರು ಎಂದರೆ ಸರಿ . ಎರಡನೇ ಎದುರುದಾರರು ಕೋವಿಡ್ -19 ಸಾಂಕ್ರಮಿಕ ರೋಗವಿದ್ದಾಗ ಹೋಟೆಲ್ ಮುಚ್ಚಿದ್ದರು ಎಂದರೆ ಸರಿ . ಆ ಸಮಯದಲ್ಲಿ ಕಾರ್ಮಿಕ ಸಂಘ ಮತ್ತು ಎರಡನೇ ಎದುರುದಾರರ ನಡುವೆ, ಒಪ್ಪಂದವಾಯಿತು ಎಂದರೆ ಸರಿ . ಕಾರ್ಮಿಕ ಸಂಘದ ಸದಸ್ಯರ ಪೈಕಿ 60 ಕಾರ್ಮಿಕರು ಆಡಳಿತ ವರ್ಗದಿಂದ ಪರಿಹಾರವನ್ನು ಪಡೆದುಕೊಂಡರು ಎಂದರೆ ಸರಿ . ನಾನು , ರೇವಣ್ಣ ಮತ್ತು ವೇಣುಗೋಪಾಲ್ ರವರು ಆಡಳಿತ ವರ್ಗದೊಂದಿಗೆ ಒಪ್ಪಂದ ಮಾಡಿಕೊಳ್ಳಲಿಲ್ಲ ಎಂದರೆ ಸರಿ .

ಸಾಕ್ಷಿದಾರರು ಮುಂದುವರೆದು  ನಮಗೆ ಕೆಲಸ ಬೇಕಾಗಿದ್ದರಿಂದ ನಾವು ಒಪ್ಪಂದಕ್ಕೆ ಒಪ್ಪಲಿಲ್ಲ ಕಾರ್ಮಿಕ ನ್ಯಾಯಾಲಯದಲ್ಲಿ ವಿವಾದ ಸಲ್ಲಿಸಿದೆವು ಎಂದರೆ ಸರಿ .

23) ಎರಡನೇ ಎದುರುದಾರರು ಹೋಟೆಲ್ ನ್ನು ಪುನರಾಂಭ ಮಾಡಿದಾಗ , ಕೆಲಸಕ್ಕೆ ವಾಪಸ್ಸು ಸೇರಿ ಎಂದು ನನಗೆ , ರೇವಣ್ಣ ಮತ್ತು ವೇಣುಗೋಪಾಲ್  ರವರಿಗೆ ಸೂಚನಾ ಪತ್ರವನ್ನು ಕಳುಹಿಸಿದರು ಎಂದರೆ ಸರಿ . ಸಾಕ್ಷಿದಾರರು ಮುಂದುವರೆದು , ಸದರಿ ಪತ್ರಕ್ಕೆ ಉತ್ತರಿಸಿರುತ್ತೇನೆ , ಖಾಯಂ ನೌಕರನಾಗಿ ಕೆಲಸ ಮಾಡಲು ಸಿದ್ದನಿರುತ್ತೇನೆ , ಗುತ್ತಿಗೆದಾರರ ಮೂಲಕ ಕೆಲಸ ಮಾಡಲು ಸಿದ್ದವಿಲ್ಲ ಎಂದು ಹೇಳಿದೆನು ಎಂದು ಹೇಳಿದರು .

24) ಎರಡನೇ ಎದುರುದಾರರು ಹೋಟೆಲನ್ನು ಪುನರಾಂಭ ಮಾಡಿದಾಗ ಗುತ್ತಿಗೆದಾರರ ಮೂಲಕ ಕೆಲಸ ಮಾಡಿ ಎಂದು ನನಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ .

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ನರಶಿಂಸಾ ಎಂ. ವಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.